ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: DTE/ADMIO/EST(10) 2022

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560001, ದಿನಾಂಕ: 05.11.2022

## ಸುತ್ತೋಲೆ

**ವಿಷಯ:** ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿನ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಉಪನ್ಯಾಸಕರುಗಳಿಗೆ 6ನೇ ಎಐಸಿಟಿಇ ವೇತನ ಶ್ರೇಣಿಯಲ್ಲಿ ವೃತ್ತಿ ಪದೋನ್ನತಿ ನೀಡುವ ಬಗ್ಗೆ.

**ಉಲ್ಲೇಖ:**
1) ಸರ್ಕಾರದ ಪತ್ರ ಸಂಖ್ಯೆ:ಇಡಿ/60/ಡಿಟಿಇ/2022 ದಿನಾಂಕ:26/04/2022.
2) ಈ ಕಛೇರಿ ಸಮ ಪತ್ರ ಸಂ. ADMIOEST(10)/ 2022 ದಿನಾಂಕ:20/05/2022 ಹಾಗೂ ,12.07.2022 ಮತ್ತು 20.07.2022

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಪೂರ್ಣಕಾಲಿಕ ನೆಲೆಯಲ್ಲಿ ಸೇವೆಗೆ ಸೇರಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕ ವರ್ಗದವರಿಗೆ ಎಐಸಿಟಿಇ 6ನೇ ವೇತನ ಶ್ರೇಣಿ ಅಧಿನಿಯಮ 2010, ಎಐಸಿಟಿಇ ಸಿ.ಎ.ಎಸ್ ಅಧಿನಿಯಮ 2012 ಮತ್ತು ಕಾಲಕಾಲಕ್ಕೆ ಎಐಸಿಟಿಇ ರವರು ನೀಡಿರುವ ಸ್ಪಷ್ಟೀಕರಣಗಳ ಪ್ರಕಾರ ಅರ್ಹರಿರುವ ಉಪನ್ಯಾಸಕರುಗಳಿಗೆ ವೃತ್ತಿ ಪದೋನ್ನತಿ ಸೌಲಭ್ಯವನ್ನು ನೀಡುವ ಸಲುವಾಗಿ ಉಲ್ಲೇಖ(1)ರ ಸರ್ಕಾರಿ ಆದೇಶದನ್ವಯ ಹಾಗೂ ಮೇಲೆ ತಿಳಿಸಿದ ಎಐಸಿಟಿಇ ಅಧಿನಿಯಮಗಳನ್ವಯ ಭರ್ತಿ ಮಾಡಿದ ಅರ್ಜಿ ಹಾಗೂ ಸಂಬಂಧಪಟ್ಟ ದಾಖಲೆಗಳನ್ನು ಕಾಲೇಜು ಹಂತದ IQAC ಸಮಿತಿಗೆ ಸಲ್ಲಿಸಬೇಕಾಗಿರುತ್ತದೆ.

ಉಲ್ಲೇಖ(2) ಈ ಕಛೇರಿ ಸುತ್ತೋಲೆಯಲ್ಲಿ ಈಗಾಗಲೇ ನೀಡಲಾಗಿರುವ ಮಾರ್ಗಸೂಚಿಗಳನ್ವಯ, **ದಿನಾಂಕ: 07/11/2015 ರಿಂದ ದಿನಾಂಕ: 28/02/2019 ರ ವರೆಗೆ** ವೃತ್ತಿ ಪದೋನ್ನತಿಗೆ **ಅರ್ಹರಿರುವ** ಪಾಲಿಟೆಕ್ನಿಕ್ ಉಪನ್ಯಾಸಕರುಗಳು ಅರ್ಜಿಗಳನ್ನು ಡೌನ್‌ಲೋಡ್ ಮಾಡಿಕೊಂಡು ತಮಗೆ ಅನ್ವಯಿಸುವ ಅರ್ಜಿ ನಮೂನೆಯನ್ನು ಭರ್ತಿಮಾಡಿ ಸೂಕ್ತ ದೃಢೀಕೃತ ದಾಖಲಾತಿಗಳೊಂದಿಗೆ ಸಂಸ್ಥೆಯ (ಐ.ಕ್ಯೂ.ಎಸ್.ಸಿ) ಸಮಿತಿಗೆ ಸಲ್ಲಿಸುವುದು, ಸದರಿ ಸಮಿತಿಯು ಅರ್ಜಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಅರ್ಹ ಉಪನ್ಯಾಸಕರುಗಳ ಅರ್ಜಿಗಳನ್ನು ಸೂಕ್ತ ದಾಖಲಾತಿ/ ಶಿಫಾರಸ್ಸಿನೊಂದಿಗೆ ಆಯುಕ್ತಾಲಯಕ್ಕೆ ದಿನಾಂಕ: 30.11.2022 ರೊಳಗೆ ಸಲ್ಲಿಸಲು ಸೂಚಿಸಲಾಗಿದೆ.

ಮುಂದುವರೆದು, ದಿನಾಂಕ:07.11.2015 ರೊಳಗೆ ಸಿ.ಎ.ಎಸ್.ಗೆ ಅರ್ಹರಾಗಿದ್ದು ಈ ಹಿಂದೆ ಪ್ರಸ್ತಾವನೆ ಸಲ್ಲಿಸದ ಉಪನ್ಯಾಸಕರುಗಳಿಗೂ ಸಹ ಮತ್ತೊಮ್ಮೆ ದಿನಾಂಕ: 30.11.2022 ರೊಳಗೆ ಪ್ರಸ್ತಾವನೆಯನ್ನು ಸಲ್ಲಿಸಲು ಕಾಲಾವಕಾಶವನ್ನು ನೀಡಲಾಗಿದೆ.

05/11/2022
ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ

**ಪ್ರತಿಗಳು:**

1) ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
2) ಮಾನ್ಯ ಆಯುಕ್ತರ ಆಪ್ತ ಶಾಖೆಗೆ ಮಾಹಿತಿಗಾಗಿ.
3) ನಿರ್ದೇಶಕರ ಆಪ್ತ ಶಾಖೆಗೆ ಮಾಹಿತಿಗಾಗಿ.
4) ಜಂಟಿ ನಿರ್ದೇಶಕರ ಆಪ್ತ ಶಾಖೆಗೆ ಮಾಹಿತಿಗಾಗಿ.
5) ಇ-ಆಡಳಿತ ವಿಭಾಗಕ್ಕೆ ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸುವ ಸಲುವಾಗಿ.
6) ಇಎಸ್‌ಟಿ(10) ವಿಭಾಗಕ್ಕೆ ಕಡತಕ್ಕಾಗಿ.